ಸಲ್ಲಲಿಲ್ಲವಲ್ಲಾ ಅಂತಾ...'

ಹುಸೇನನ ಮಾತು ಮುಗಿಯುವ ಮೊದಲೇ... ಆತನ ಮಾತಿಗಡ್ಡ ಬಂದ ದೇವು ಪಟೇಲ್ರು 'ಏನಾ ನೀನು ಹೇಳ್ತಿರೋದು ? ತಿಂಮ ಇವತ್ತು ಬದುಕಿರ್ತಿದ್ರೆ ಅಂದ್ರೆ... ಏನರ್ಥ?! ಅವನಿಗೇನಾಗಿದೆ? ಎಂದು ಆತಂಕದಿಂದ ಆತನನ್ನು ಪ್ರಶ್ನಿಸಿದ್ದರು.

'ಅಯ್ಯೋ... ನಿಮ್ಗೆ ವಿಷಯ ಇನ್ನೂ ಗೊತ್ತಿಲ್ವ ಧನಿಗಳೇ !? ನಿನ್ನೆ ಮಧ್ಯಾಹ್ನ ನಿಮ್ಮ ತಿಂಮ ಪೂಜಾರಿ ಮಗಳು ಜಾನಕಿಯ ಮನೆ ಪಕ್ಕದಲ್ಲಿದ್ದ ನದಿಬದಿಗೆ ಸ್ನಾನಕ್ಕೆಂದು ಹೋಗಿದ್ದನಂತೆ. ಹಾಗೆ ಹೋದವ... ಮರಳಿ ಬರಲೇ ಇಲ್ಲವಂತೆ. 'ಅಂವ ಜೀವ ತಕ್ಕೊಳಕ್ಕಂತಲೇ ನಿನ್ನೆ ನದಿ ನಡುವಿನ ಸುಳಿ ಬಳಿಯಲ್ಲೇ ಈಜುತ್ತಿದ್ದ' ಎಂದು ಆತನ ಈಜನ್ನು ನೋಡಿದ್ದವರು ಹೇಳ್ತಿದ್ರಂತೆ... ನಂಗೂ ಈ ಸಂಗತಿ ಗೊತ್ತೇ ಇರ್ಲಿಲ್ಲ. ಇವತ್ತು ಬೆಳಿಗ್ಗೆ ನಾನು ಕುಡ್ಲದ ಬಂದರಿನಿಂದ ತೊರ್ತಲಿನ ತಬ್ರಾಯರ ಬಂಡಸಾಲೆಗೆ ಲೋಡು ತಂದಿದ್ದೆ. ಬರುವಾಗ ಲಾರಿಯಲ್ಲಿ ತಿಂಮನ ಕಡೆ ಅಳಿಯ ಕೇಶವನನ್ನೂ ಹತ್ತಿಸಿಕೊಂಡು ಬಂದೆ. ಆತ ಇಲ್ಲಿಗೆ ತನ್ನ ಅತ್ತೆ ಮನೆಗಂತ ಹೊರಟವನಂತೆ. ದಾರಿಯಲ್ಲಿ ಆತ, ಆ ಮರ ಮತ್ತು ಮಾವನ ದುಃಖದ ಕತೆ ಹೇಳ್ಕೊಂಡು... ಅತ್ತೇ ಬಿಟ್ಟ ಮಾರಾಯ್ರೆ? ನಂಗೆ ಜೀವ ತಡ್ಕೊಳ್ಳಿಕ್ಕಾಗ್ಲಿಲ್ಲ...'

ಹುಸೇನನ ಮಾತು ಇನ್ನೂ ಮುಂದುವರಿಯುತ್ತಿತ್ತೋ ಏನೋ... ಆದರೆ, ಇತ್ತ ಅವನೆದುರಿಗೆ ನಿಂತಿದ್ದ ದೇವುಪಟೇಲರು ಆತನ ಮಾತನ್ನು ಕೇಳಿಸಿಕೊಳ್ಳುತ್ತಿದ್ದಂತೆ ಕಡಿದಿಟ್ಟ ಬಸಳೆ ಬಳ್ಳಿಯಂತೆ ಬಾಡತೊಡಗಿದ್ದರು; ತಾವು ಕುಡಿಯಲೆಂದು ಕೈಯಲ್ಲಿ ಎತ್ತಿಕೊಂಡಿದ್ದ ಬೊಂಡವನ್ನು ಪಟೇಲರು ತಟ್ಟನೆ ತನ್ನ ಪಕ್ಕದಲ್ಲಿದ್ದ ತೆಂಗಿನಕಟ್ಟೆಯ ಮೇಲಿಟ್ಟು... ಆ ಕಟ್ಟೆಯ ಮೇಲೆಯೇ ಅಧೀರರಾಗಿ ಕುಳಿತುಬಿಟ್ಟರು; ಈ ಸನ್ನಿವೇಶವನ್ನು ಕಂಡು ಆತಂಕಿತರಾದ ಕಾದ್ರಿಬ್ಯಾರಿಗಳು ತಟ್ಟನೆ ತಮ್ಮ ತಲೆಗೆ ಸುತ್ತಿದ್ದ ಬಿಳಿಮುಂಡಾಸನ್ನು(ರುಮಾಲನ್ನು) ಕಿತ್ತು ತೆಗೆದು ಅದನ್ನು ಅರಳಿಸಿಬಿಟ್ಟು ಎರಡೂ ಕೈಯಲ್ಲೂ 'ಸಂಯ್, ಸುಂಯ್' ಎಂದು ಪಟೇಲರಿಗೆ ಗಾಳಿ ಹಾಕತೊಡಗಿದರು. ಆದರೆ ಪಟೇಲರ ಬಾಡಿದ ಮುಖ ಅರಳಲೇ ಇಲ್ಲ.

## ಎಚ್. ನಾಗವೇಣಿ

ದಕ್ಷಿಣ ಕನ್ನಡ ಜಿಲ್ಲೆಯ ದಟ್ಟ ಸಾಮಾಜಿಕ, ಸಾಂಸ್ಕೃತಿಕ ವಿವರಗಳೊಂದಿಗೆ ಬರೆಯುವ ನಾಗವೇಣಿ ಮಂಗಳೂರಿನ ಹೊನ್ನಕಟ್ಟೆಯವರು. ಅವರ 'ಗಾಂಧಿ ಬಂದ' ಕಾದಂಬರಿ ಕನ್ನಡಿಗರ ಆದರಕ್ಕೆ ಪಾತ್ರವಾದ ಮಹತ್ವದ ಕಾದಂಬರಿ. ಅವರ ವಿಶಿಷ್ಟ ಕಥನ ಕ್ರಮ, ಶೈಲಿಗಳು ಓದುಗರನ್ನು ತಮ್ಮತ್ತ ಸೆಳೆಯುವಂತಿವೆ.

'ನಾಕನೇ ನೀರು', 'ಮೀಯುವ ಆಟ' ಎಂಬ ಕಥಾಸಂಗ್ರಹಗಳನ್ನು, 'ವಸುಂಧರೆಯ ಗ್ಯಾನ', 'ಸೂರ್ಯನಿಗೊಂದು ವೀಳ್ಯ' ಎಂಬ ಪ್ರಬಂಧ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಅವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕರಾಗಿ ಕೆಲಸ ಮಾಡುತ್ತಿದ್ದಾರೆ. ನಾಗವೇಣಿ, ತಮ್ಮ ಹೊಸ ಕಥಾಸಂಗ್ರಹದ ಪ್ರಕಟಣೆಯ ಸಿದ್ಧತೆಯಲ್ಲಿದ್ದಾರೆ.